ಸಾಕ್ಷಿಯನ್ನು ದಿಃ 03-02-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ- ಶ್ರೀ ಬಿ ಎಮ್ ಎಚ್ ವಕೀಲರಿಂದಃ (ವಾದಿ ಪರವಾಗಿ)**

ಪ್ರತಿವಾದಿ ನಂ.1 ರಿಂದ 5 ನನಗೆ 2014 ಕ್ಕಿಂತ ಮೊದಲಿನಿಂದಲೂ ಪರಿಚಯ ಇದ್ದಾರೆ. ನಾನು ದಾವಾ ಆಸ್ತಿ ಖರೀದಿಸುವ ಒಂದು ವರ್ಷ ಮುಂಚಿನಿಂದಲೂ ಅವರ ಪರಿಚಯ ಇತ್ತು. ದಾವಾ ಆಸ್ತಿ ಖರೀದಿಸುವ ಮೊದಲು ನಾನು ಆಸ್ತಿ ಉತಾರ, ಭಕ್ಷಿಸ ಪತ್ರ ಹಾಗೂ ಋಣಭಾರ ಪ್ರಮಾಣ ಪತ್ರ ನೋಡಿದ್ದೇನೆ. ದಾವಾ ಆಸ್ತೆ ಮೂಲತಃ ಪ್ರಮಿಳಾಬಾಯಿ ಯವರಿಗೆ ಸೇರಿದ್ದು. ನಿಪಿಃ 2 ನ್ನು ನೋಡಿದ್ದೇನೆ. ಸದರಿ ದಾಖಲೆ ಪ್ರಕಾರ ದಾವಾ ಆಸ್ತಿ ಮೊದಲು ಪ್ರಮಿಳಾಬಾಯಿ ಇವರ ಗಂಡ ಸುರಜನಾಥಸಾ ರಾಮಾಸಾ ಕಬಾಡಿ ಇವರ ಹೆಸರಿನಲ್ಲಿತ್ತು ಎಂದರೆ ಸರಿ. ಸದರಿ ಸುರಜನಾಥಸಾ ಮೃತ ಪಟ್ಟ ನಂತರ 1970 ರಲ್ಲಿ ವಾರಸಾನಾತೆಯಿಂದ ಅವರ ಹೆಂಡತಿ ಪ್ರಮಿಳಾಬಾಯಿ ಹಾಗೂ ಮಕ್ಕಳಾದ ಗಂಗುಬಾಯಿ ಮತ್ತು ಸುಮಿತ್ರಾಬಾಯಿ ಇವರ ಹೆಸರು ದಾಖಲಾಗಿವೆ ಎಂದರೆ ಸರಿ. ನಂತರ 1988 ರಲ್ಲಿ ವಾಟ್ನಿ ವರದಿ ಪ್ರಕಾರ ಗಂಗುಬಾಯಿ ಮತ್ತು ಸುಮಿತ್ರಾಬಾಯಿ ಇವರ ಹೆಸರು ದಾಖಲಾಗಿವೆ ಎಂದರೆ ಸರಿ. ನಾನು ಆಸ್ತಿ ಖರೀದಿಸುವ ಮೊದಲು ಸದರಿ ವಾಟ್ನಿ ಪತ್ರ ತೆಗಿಸಿ ನೋಡಿಲ್ಲ. ಸುಮಿತ್ರಾಬಾಯಿ ತೀರಿಕೊಂಡ ನಂತರ ಅವರ ವಾರಸುದಾರರು ಅಂದರೆ ಅವರ ಗಂಡ ಜವಹಾರಲಾಲ್ ಅಂಬಾಸಾ ಪೂಜಾರಿ ಹಾಗೂ ಮಗ ಲಕ್ಷ್ಮಣ ತಂದೆ ಜವಹಾರಲಾಲ್ ಪೂಜಾರಿ ಹೆಸರು ದಾಖಲಾಯಿತು ಎಂದರೆ ಸರಿ. ಆ ಬಗ್ಗೆ ವರದಿ ಹಾಗೂ ದಾಖಲೆ ತೆಗಿಸಿ ನೋಡಿಲ್ಲ. ಸಾಕ್ಷಿ ಮುಂದುವರೆದು ಸದರಿ ವರದಿಯನ್ನು ನಾನು ನೋಡಿಲ್ಲ, ಆದರೆ ಅದನ್ನು ವಾದಿಯರು ಹಾಜರು ಪಡಿಸಿದ್ದಾರೆ ಎಂದು ಹೇಳುತ್ತಾರೆ. ಗಂಗುಬಾಯಿ ಒಬ್ಬರೆ ದಾವಾ ಆಸ್ತಿಯ ಸಂಪೂರ್ಣ ಮಾಲೀಕರಾಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆಸ್ತಿ ಖರೀದಿಸುವಾಗ ದಾವಾ ಆಸ್ತಿ ಗಂಗುಬಾಯಿ ಇವರ ಹೆಸರಿನಲ್ಲಿ ಇತ್ತು ಎಂದು ಹೇಳುತ್ತಾರೆ. ದಾವಾ ಆಸ್ತಿ ಖರೀದಿಸುವ ಮೊದಲು ನಾನು ವಾದಿಯರನ್ನು ವಿಚಾರಿಸಿಲ್ಲ. ಆಸ್ತಿ ಖರೀದಿಸುವ ಮೊದಲು ನಾನು ಯಾವುದೇ ಜಾಹೀರಾತು ನೋಟಿಸು ಪ್ರಕಟಣೆ ಮಾಡಿಲ್ಲ. ಗಂಗುಬಾಯಿ ಸಿಟಿಎಸ್ ನಂ.4271/1 ದ

ದಕ್ಷಿಣ ಭಾಗದ ಅರ್ಧ ಹಿಸ್ಸಾ ಕ್ಕೆ ಮಾತ್ರ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. ಅದೆ ರೀತಿ ಸಿಟಿಎಸ್ ನಂ.4271/1 ದ ಉತ್ತರ ಭಾಗದ ಅರ್ಧ ಹಿಸ್ಸಾ ಕ್ಕೆ ವಾದಿಯರು ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಎತ್ತಿ ಹಾಕುವ ಉದ್ದೇಶದಿಂದ ನಾನು ಹಾಗೂ ಪ್ರತಿವಾದಿ ನಂ.5 ಶಾಮೀಲಾಗಿ ವಾದಿಗೆ ತಿಳಿಸದೆ ಖೊಟ್ಟಿ ಖರೀದಿ ಪತ್ರ ಮಾಡಿದ್ದೇವೆ ಎಂದರೆ ಸರಿಯಲ್ಲ.

ಸಿಟಿಎಸ್ ನಂ.4270/2 ಬಿ ಆಸ್ತಿ ಪ್ರಮಿಳಾಬಾಯಿಗೆ ವಾಟ್ನಿಯಲ್ಲಿ ಬಂದಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರ ತಂದೆಯಿಂದ ಬಂದಿದೆ ಎಂದು ಹೇಳುತ್ತಾರೆ. ಪ್ರಮಿಳಾಬಾಯಿ ತೀರಿಕೊಂಡ ನಂತರ ಅವರ ಆಸ್ತಿಗೆ ಅವರ ಮಕ್ಕಳಾದ ಗಂಗುಬಾಯಿ ಮತ್ತು ಸುಮಿತ್ರಾಬಾಯಿ ವಾರಸುದಾರರು ಎಂದರೆ ಗಂಗುಬಾಯಿ ಮಾತ್ರ ವಾರಸುದಾರರು ಎಂದು ಹೇಳುತ್ತಾರೆ. ನಿಡಿಃ 5 ಭಕ್ಷಿಸ ಪತ್ರ 1999 ರಲ್ಲಿ ನೋಂದಣಿಯಾಗಿದೆ ಎಂದರೆ ಸರಿ. ಪ್ರಮಿಳಾಬಾಯಿ 1989 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ನಾನು ಹಾಗೂ ಪ್ರತಿವಾದಿ ನಂ.1 ರಿಂದ 5 ಖೊಟ್ಟಿ ಭಕ್ಷಿಸ ಪತ್ರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಗಂಗುಬಾಯಿ ಹಾಗೂ ಪ್ರತಿವಾದಿ ನಂ.1 ರಿಂದ 5 ರವರಿಗೆ ದಾವಾ ಆಸ್ತಿಯಲ್ಲಿ ಸಂಪೂರ್ಣ ಹಕ್ಕು ಇರದೆ ಇದ್ದರೂ ಸಹ ವಾದಿಯ ಆಸ್ತಿ ಎತ್ತಿ ಹಾಕುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಖರೀದಿ ಪತ್ರ ಮಾಡಿಸಿಕೊಂಡಿದ್ದೇನೆಂದರೆ ಸರಿಯಲ್ಲ. 2013 ರಲ್ಲಿ ವಾದಿ ದಾವಾ ಆಸ್ತಿಯನ್ನು ಯಾರು ಖರೀದಿಸಿದಂತೆ ಜಾಹೀರು ಪ್ರಕಟಣೆ ಹೊರಡಿಸಿದ್ದರು ಎಂದರೆ ಗೊತ್ತಿಲ್ಲ. ನಾನು ಸದ್ಭಾವನೆಯಿಂದ ಕೂಡಿದ ಖರೀದಿದಾರ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಹೆಸರಿಗೆ ಮಾಡಿಕೊಂಡ ಖರೀದಿ ಪತ್ರ ವಾದಿಯ ಮೇಲೆ ಬಂಧನಕಾರಿ ಇಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ವಾದಿ ದಾವಾ ಆಸ್ತಿಗೆ ಸಂಪೂರ್ಣ ಮಾಲೀಕರಾಗಿದ್ದು,ಸಿಟಿಎಸ್ ನಂ.4270/2 ಬಿ ದಲ್ಲಿಯೂ ಸಹ ಹಕ್ಕು ಹೊಂದಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.